# ಇದ್ದರೇನು ಹತ್ತಿರ, ಎಷ್ಟೊಂದು ನಡುವೆ ಅಂತರ...

ಲಾರಾರ ಪರಿವಾರದ ಸದಸ್ಯರು ರಾಜ್ಯದ ಚರ್ಚ್‌ನ ಸದಸ್ಯರಾಗಿದ್ದರು. ಆದರೆ ಅವರು ವಿವಾಹ ಮತ್ತು ಅಂತಿಮ ಸಂಸ್ಕಾರವನ್ನು ಹೊರತುಪಡಿಸಿ ಬೇರೆ ಸಮಯದಲ್ಲಿ ಚರ್ಚ್‌ಗೆ ಹೋಗುತ್ತಿರಲಿಲ್ಲ. ಆದರೆ ಚರ್ಚ್ ನನಗೆ ನನ್ನ ಜೀವನದ ಒಂದು ಪ್ರಮುಖ ಭಾಗವಾಗಿತ್ತು.

'ನನಗೂ ಚರ್ಚ್ ನನ್ನ ಜೀವನದ ಪ್ರಮುಖ ಭಾಗವಾಗಿದೆ, ಆದರೆ ಡೆನ್ಸರು (ಡೆನ್ಮಾರ್ಕ್‌ನ ಡ್ಯಾನಿಶ್ ಜನರನ್ನು ಡೆನ್ಸ್ ಎನ್ನಲಾಗುತ್ತದೆ) ಧರ್ಮದ ಬಗ್ಗೆ ಹೆಚ್ಚು ಮಾತನಾಡಲು ಇಷ್ಟಪಡುವುದಿಲ್ಲ' ಎಂದ ಪಾಲ್.

ನಾನು ಲಾರ್ಸ್‌ಗೆ ಅನೇಕ ಬಾರಿ ನನ್ನೊಂದಿಗೆ ಚರ್ಚ್‌ಗೆ ಬರಲು ಹೇಳಿದೆ. ಅವನು ಪ್ರತಿ ಬಾರಿಯೂ ಕಠೋರವಾಗಿ ಅಲ್ಲಗಳೆದ. ನಾನು ನಿನ್ನ ಜೊತೆಯಲ್ಲಿ ಎಲ್ಲಿಗಾದರೂ ಹೋಗಬಲ್ಲೆ, ಚರ್ಚ್‌ಗೆ ಹೋಗಲ್ಲ, ಚರ್ಚ್‌ಗೆ ಹೋಗುವುದು ನನಗೆ ಆಡಂಬರ ಅನ್ನಿಸುತ್ತದೆ ಎನ್ನುತ್ತಿದ್ದ.

ಚರ್ಚ್‌ಗೆ ಹೋಗುವುದು ಆಡಂಬರ ಅಥವಾ ತೋರ್ಪಡಿಕೆಯಲ್ಲ. ಅದು ಧರ್ಮದ ಬಗ್ಗೆ ನಮಗಿರುವ ಶ್ರದ್ಧೆಯನ್ನು ದೃಢಪಡಿಸುವ ಜಾಗ. ಆದರೆ ನಾನು ಅವನಿಗೆ ಬಲಾತ್ಕಾರ ಮಾಡಲು ಸಾಧ್ಯವಿರಲಿಲ್ಲ. ಚರ್ಚ್‌ಗೆ ಹೋಗುವುದು ನನ್ನ ಜೀವನದ ಅವಶ್ಯಕತೆಯಾದ್ದರಿಂದ, ನಾನು ನನ್ನನ್ನೇ ಚರ್ಚ್‌ಗೆ ಸಮರ್ಪಿಸಿಕೊಂಡೆ. ನನ್ನ ಮಗ ಜೋಶ್‌ನೊಂದಿಗೆ ನಿಯಮಿತವಾಗಿ ಚರ್ಚ್‌ಗೆ ಹೋಗಲಾರಂಭಿಸಿದೆ. ಭಾಷೆ ಬೇರೆಯಾಗಿದ್ದಾಗ್ಯೂ, ಪೂಜಾವಿಧಾನಗಳು ಕೇರಳ ಮತ್ತು ಆಫ್ರಿಕಾದ ಚರ್ಚ್‌ಗಳಂತೆಯೇ ಇದ್ದವು.

'ಇಲ್ಲಿ ನಿಮ್ಮ ಸ್ವಿಮ್ಮಿಂಗ್ ಎಲ್ಲಿಗೆ ಬಂತು?'

'ಓಹ್, ನನ್ನ ಸ್ವಿಮ್ಮಿಂಗ್...! ನಾನು ಕೇರಳ ಮತ್ತು ಕೀನ್ಯಾದಲ್ಲಿ ನೀರನ್ನು ದ್ರವವಾಗಿಯೇ ನೋಡಿದ್ದೆ, ಆದರೆ ಡೆನ್ಮಾರ್ಕ್‌ನಲ್ಲಿ ಮೊದಲ ಬಾರಿಗೆ ನೀರು ಆಕಾಶದಿಂದ ಘನರೂಪದಲ್ಲಿ ಸುರಿಯುವುದನ್ನು ನೋಡುತ್ತಿದ್ದೆ. ಭೂಮಿಯ ಮೇಲೆ ಹಿಮಕಣಗಳ ರಗ್ಗುಗಳು ಹಾಸಿರುತ್ತಿದ್ದವು, ನಂತರ ಕರಗಿ ಅವು ದ್ರವವಾಗುತ್ತಿದ್ದವು. ಬೆಳ್ಳಿಸೌಂದರ್ಯವನ್ನು ನೋಡಿ ಮನಸ್ಸು ಮುದಗೊಳ್ಳುತ್ತಿತ್ತು'.

ಡೆನ್ಮಾರ್ಕ್ ಸಮುದ್ರದಿಂದ ಸುತ್ತುವರೆದಿದೆ, ಇದರ ಲಘು ಆಕಾರವನ್ನು ನೋಡಿದಾಗ ಇದರ ಸಮುದ್ರದ ಗಡಿ ತುಂಬಾ ದೀರ್ಘವಾಗಿದೆ. ಆದರೆ ಇದರ ನೀರು ಭಾರತ ಮತ್ತು ಆಫ್ರಿಕಾದಂತೆ ಬಿಸಿ ಮತ್ತು ಆಳವಿರಲಿಲ್ಲ, ಪ್ರತಿಯಾಗಿ ಆಳ ಮತ್ತು ಶೀತಲವಾಗಿತ್ತು. ನೀರಿನ ಘನತ್ವ, ತಾಪಮಾನ ಮತ್ತು ಲವಣ ಎಲ್ಲವೂ ಭಿನ್ನವೆಂದು ಅನ್ನಿಸಿತು. ಇಲ್ಲಿ ನನಗೆ ಸ್ವಿಮ್ಮಿಂಗ್‌ನ ಭಿನ್ನ ಅನುಭವವಾಯಿತು. ನಾನು ತಣ್ಣನೆಯ ನೀರಿನಲ್ಲಿ ಈಜುವ ಅಭ್ಯಾಸವನ್ನು ಮಾಡಿಕೊಂಡೆ. ಮನುಷ್ಯನ ಶರೀರ, ವಾತಾವರಣಕ್ಕೆ ತುಂಬಾ ಬೇಗನೆ ಹೊಂದಿಕೊಳ್ಳುತ್ತದೆ.

ಡೆನ್ಸರಿಗೆ ಶೀತಲತೆಯ ಬಗ್ಗೆ ವಿಶೇಷ ಒಲವಿದೆ. ಶೀತಕಾಲೀನದ ಸ್ನಾನ ಇಲ್ಲಿ ತುಂಬಾ ಪ್ರಸಿದ್ಧವಾಗಿದೆ. ಚಳಿಗಾಲದಲ್ಲಿ ಜೀರೊ ಡಿಗ್ರಿಗಿಂತಲೂ ಕಡಿಮೆ ಇರುವ

